# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೧

## ಹಳಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

ಅವಧಿ : ೩ ಗಂಟೆಗಳು ಗರಿಷ್ಠ ಅಂಕಗಳು : ೧೦೦

**I**. ಇವುಗಳಲ್ಲಿ ಹತ್ತು ಪದಗಳಿಗೆ ಅರ್ಥ ಬರೆಯಿರಿ ೧ x ೧೦=೧೦

ಬಸನ, ಪರಿಭವ, ಶರ, ಕಜ್ಜ, ಸುಕೃತ, ಬುಧ, ಉರ್ವಿ, ನಾತ, ಪೊಡವಿ, ಬಟ್ಟೆ, ದಿವಾಕರ, ತನುಜ, ಚಂದನ, ಪಗೆ, ಮೇರು, ಅಂಬುಜ

**II**. ಎರಡು ಪದ್ಯಗಳ ಭಾವಾರ್ಥ ಬರೆಯಿರಿ. ೨ x ೧೦=೨೦

೧. ಕರಿ ತುರಗ ನರ ಕಳೇಬರ
ಕರಾಳ ರಣರಂಗದಲ್ಲಿ ಬರೆವರೆ ಕಂಡಂ
ನರಕರ ವಿಮುಕ್ತ ಶರಜ
ರ್ಜರಿತಾಂಗನನಂಗರಾಜನಂ ಕುರುರಾಜಂ

೨. ಪೆಣ್ಣ ಪೆತ್ತವರ ಬಳಗ ಬೆಳೆವುದು ಬೇಗ
ಪೆಣ್ಣ ಪೆತ್ತವರು ಪೆರ್ಚುವರು
ಪೆಣ್ಣ ಪೆತ್ತುದರಿಂದೆ ಪೆಸರೆನಿಸಿತು ಮಿಗೆ
ಬಣ್ಣವೇರಿತು ಪಾಲ್ಗಡಲು

**III**. ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ ೫ x ೨=೧೦

೧. ಬಾದಾಮಿ ಶಾಸನ ೨. ಕವಿರಾಜ ಮಾರ್ಗ

೩. ಕನಕದಾಸರು



೮/೧

**IV**. ಮೂರು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ ೩ x ೧೦=೩೦

೧. ಮಹಾಶ್ವೇತೆ ಮುನಿಕುಮಾರನಲ್ಲಿ ಮೋಹಗೊಂಡ ಬಗೆಯನ್ನು ವಿವರಿಸಿ.

೨. ಜಗನ್ನಾಥ ವಿಜಯ ಕಾವ್ಯದಲ್ಲಿ ಶ್ರೀಕೃಷ್ಣ ವನವಿಹಾರದಲ್ಲಿ ಹಲವು ರೀತಿಯ ಹೂವುಗಳನ್ನು ಕಂಡು ಆನಂದಿಸಿದ ಪರಿಯನ್ನು ವಿಶ್ಲೇಷಿಸಿ.

೩. ಕಬ್ಬಿಗರ ಕಾವದಲ್ಲಿ ಶಿವ–ಮನ್ಮಥರ ನಡುವಣ ಯುದ್ಧ ಪ್ರಸಂಗವನ್ನು ಕುರಿತು ಬರೆಯಿರಿ.

೪. ರತ್ನಾಕರವರ್ಣಿ ತನ್ನ ಕಾವ್ಯದಲ್ಲಿ ಜೀವನ ಮೌಲ್ಯಗಳನ್ನು ಯಾವ ರೀತಿ ಪ್ರತಿಪಾದಿಸಿದ್ದಾರೆ? ವಿವರಿಸಿ.

**V**. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. ೩ x ೧೦=೩೦

೧. ಶ್ರೀರಾಮನು ಸೀತೆಯನ್ನು ಕಾಡಿಗೆ ಕಳುಹಿಸಿದ ಸಂದರ್ಭದಲ್ಲಿ ಲಕ್ಷ್ಮಣನೊಂದಿಗೆ ನಡೆಸಿದ ಚರ್ಚೆಯನ್ನು ಬರೆಯಿರಿ.

೨. ಅಲ್ಲಮ, ಸಿದ್ಧರಾಮನನ್ನೂ ಹಳಿಯಲು ಕಾರಣವೇನು? ವಿವರಿಸಿ.

೩. ಕಡೆಯುಂಟೆ ಸುತರ ಮೋಹಕ್ಕೆ ಈ ಮಾತನ್ನು ರಾಮನಾಥ ಚರಿತೆಯ ಕಾವ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

೪. ದೇಹದಾನದ ಕಥನವನ್ನು ಲಕ್ಷ್ಮೀಶನ ಕಾವ್ಯಭಾಗದಿಂದ ಸಂಗ್ರಹಿಸಿ ವಿಶ್ಲೇಷಿಸಿ

* * * *

ಸ್ಥಾಪನೆ : ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ರತ್ನ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೨

## ಹೊಸಗನ್ನಡ ಸಾಹಿತ್ಯ (ಕಾವ್ಯ ಮತ್ತು ಸಣ್ಣಕತೆ)

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

ಅವಧಿ : ೩ ಗಂಟೆಗಳು ಗರಿಷ್ಠ ಅಂಕಗಳು : ೧೦೦

ಭಾಗ – ೧

**I.** ಒಂದರ ಭಾವಾರ್ಥವನ್ನು ಬರೆಯಿರಿ. ೧x೬=೬

೧) ಭಗವಂತ್ ಏನ್ರ ಭೂಮಿಗ್ ಇಳದು
ನನ್ ತಾಕ್ ಬಂದಾಂತ್ ಅನ್ನು ;
ಪರ್‌ಗಿರೀಷೆ ಮಾಡ್ತಾನ್ ಔನು
ಭಕ್ತನ್ ಮೇಲ್ ಔನ್ ಕಣ್ಣು !

೨) ಪುಚ್ಚ ಸೊಬಗನು ಬಿಚ್ಚಿ
ತಲೆ ತುರಾಯಿಯ ಕುಣಿಸಿ
ಬೆಡಗುಹಕ್ಕಿಯ ನಡೆಗೆ
ಇನ್ನಿಷ್ಟು ಮತ್ತಿಷ್ಟು ತಾಯ ಕರೆಗೆ!

**II.** ನಾಲ್ಕನ್ನು ಸಂದರ್ಭ ಸಹಿತ ವಿವರಿಸಿ. ೪x೪=೧೬

೧) ಅಕ್ಕಯ್ಯ ನೀನು ನಮ್ಮನ್ನು ಬಿಟ್ಟು ಹೋಗುವರೆ.
೨) ಹಚ್ಚಿರುವ ದೀಪದಲಿ ತಾಯ ರೂಪ
೩) ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ
೪) ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
೫) ನಾಳಿನ ನಾಗರಿಕರಾದ ಇಂದಿನ ಮಕ್ಕಳೆಲ್ಲ.
೬) ಗೊಂಬೆ ಸದಾ ನನ್ನ ಮಡಿಲಲ್ಲಿ ಬಗಲಲ್ಲಿ.

(ಪು.ತಿ.ನೋ)



**III.** ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. ೪x೨=೮

೧) ಬಿ.ಎಂ. ಶ್ರೀಕಂಠಯ್ಯ
೨) ಹೊನಲ ಹಾಡು
೩) ಜಿ.ಎಸ್. ಶಿವರುದ್ರಪ್ಪ
೪) ಪಿ. ಲಂಕೇಶ್
೫) ಕಾಲ ನಿಲ್ಲುವುದಿಲ್ಲ
೬) ಚನ್ನವೀರ ಕಣವಿ

**IV.** ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ೪x೫=೨೦

೧. ಚಿಗರಿಗಂಗಳ ಚೆಲುವಿ ಕವಿತೆಯನ್ನು ಬೇಂದ್ರಯವರು ಚಿತ್ರಿಸಿರುವ ರೀತಿಯನ್ನು ವಿವರಿಸಿ.

೨. ಡಿ.ಎಸ್. ಕರ್ಕಿಯವರು ಹಚ್ಚೇವು ಕನ್ನಡದ ದೀಪವನ್ನು ಕನ್ನಡದ ಮೂಲಕ ಯಾವ ರೀತಿ ಬೆಳಗಿಸಿದ್ದಾರೆ? ಚಿತ್ರಿಸಿ.

೩. ಮಬ್ಬಿನಿಂದ ಮಬ್ಬಿಗೆ ಕವಿತೆಯ ಸ್ವಾರಸ್ಯವನ್ನು ವಿವರಿಸಿ.

೪. ಕೆ.ಎಸ್. ನಿಸಾರ್ ಅಹಮದ್ ಅವರು ಅಸಾಯಕರ ಮನಸ್ಥಿತಿಯನ್ನು ತಮ್ಮ ಕವಿತೆಯಲ್ಲಿ ಯಾವ ರೀತ ಚಿತ್ರಿಸಿದ್ದಾರೆ, ವಿವರಿಸಿ.

೫. ಹೊಸ ಸಮಾಜದ ಸೃಷ್ಟಿಗೆ ಬಿ.ಟಿ. ಲಲಿತಾನಾಯಕ್ ಏನು ಮಾಡಬೇಕೆಂದು ಹೇಳುತ್ತಾರೆ? ಚರ್ಚಿಸಿ.

೬. ಡಾ. ಸಿದ್ದಲಿಂಗಯ್ಯ ಅವರು ಸಾವಿರಾರು ನದಿಗಳ ಮುಖಾಂತರ ಹೋರಾಟದ ಹಾದಿಯನ್ನು ಯಾವ ರೀತಿ ಹಿಡಿಯುತ್ತಾರೆ? ವಿವರಿಸಿ.

**V.** ಒಂದು ಪ್ರಶ್ನೆಗೆ ಉತ್ತರಿಸಿ. ೧x೧೦=೧೦

೧. ಸವಿತಾ ನಾಗಭೂಷಣ ಅವರು ಕನ್ನಡತನವನ್ನು ಉಳಿಸಿಕೊಳ್ಳಬೇಕಾದ ಸಂಕಟವನ್ನು ಹೇಗೆ ಚಿತ್ರಿಸಿದ್ದಾರೆ? ವಿಶ್ಲೇಷಿಸಿ.

೨. ಲಾಟೀನ ಬೆಳಕಲ್ಲಿ ಕವನದ ವಿಶೇಷತೆಯನ್ನು ಕುರಿತು ಬರೆಯಿರಿ

(ಪು.ತಿ.ನೋ)

## ಭಾಗ – ೨

## ಸಣ್ಣಕಥೆಗಳು

**I.** ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ೩x೮=೨೪

೧) ಕೊಡಗಿನ ಗೌರಮ್ಮನ ಕಥೆಯಲ್ಲಿ 'ಪುನರ್ವಿವಾಹ' ವಿಚಾರದ ಆಶಯವೇನು? ವಿವರಿಸಿ.

೨) ನೋಂಬು ಕತೆಯಲ್ಲಿ ಬರುವ ಅದ್ದುವಿನ ಮುಗ್ಧ ಮನಸ್ಥಿತಿಯನ್ನು ಕತೆಯ ಹಿನ್ನೆಲೆಯಲ್ಲಿ ಬರೆಯಿರಿ.

೩) ನಾ. ಡಿಸೋಜ ಅವರ ಶಿಲ್ಪ ಕತೆಯಲ್ಲಿ ಶಿಲ್ಪಕಲೆಗೆ ಜಾಗತೀಕರಣದಿಂದ ಉಂಟಾದ ಅಪಾಯಗಳನ್ನು ಚಿತ್ರಿಸಿ.

೪) ಕತೆಗಾರರು ಅರಿವು ಮರಳಿದ ವೇಳೆ ಕತೆಯಲ್ಲಿ ಶಿವಾನಂದನ ವ್ಯಕ್ತಿತ್ವದಲ್ಲಿನ ಬಿರುಕನ್ನು ಯಾವ ರೀತಿ ತೆರೆದಿಟ್ಟಿದ್ದಾರೆ. ವಿವರಿಸಿ.

೫) ಬಿಡುಗಡೆ ಕತೆಯಲ್ಲಿ ಸರೋಜಳ ಗಂಡ ತೀರಿಕೊಂಡ ಸಂದರ್ಭವನ್ನು ಕತೆಯ ಹಿನ್ನೆಲೆಯಲ್ಲಿ ವಿವರಿಸಿ.

೬) ಹಮೀದಾಯಣ ಕತೆಯಲ್ಲಿ ಹಮೀದನ ಜೀವನ ಪ್ರೀತಿ ಹೇಗೆ ಮೂಡಿ ಬಂದಿದೆ ವಿಶ್ಲೇಷಿಸಿ.

**II.** ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. ೪x೨=೮

೧) ಪಂಜೆ ಮಂಗೇಶರಾವ್

೨) ಮಣ್ಣು ದಿಬ್ಬದ ಮೇಲೆ

೩) ನೆಲ ನಡುಗಿದಾಗ

೪) ಕುಬುಸ

೫) ರಾಜಣ್ಣ

೬) ಕರ್ವಾಲೋ ಮನೆಯ ವೈಶಿಷ್ಟ್ಯ

**III.** ಎರಡಕ್ಕೆ ಸಂದರ್ಭ ಸಹಿತ ವಿವರಿಸಿ. ೨x೪=೮

೧) ಏನನ್ನಾ ತಂದ್ಯಾ...? ನಾವೆಲ್ಲಾ ಸಾಯ್ಬೇಕೂಂತ ಮಾಡಿದ್ಯೇನು?

೨) ಸುಡುಗಾಡ? ಏನಪಾ ಹಾಂಗಂದ್ರ? ಮಾಸ್ತರ ಆಶ್ಚರ್ಯದಿಂದ ಕೇಳಿದ

೩) "ಈಗ ಸದ್ಯಕ್ಕೆ ನನ್ನ ಬಾಣ್ತನವ ಅವನೇ ಮಾಡ್ತಾ ಅವ್ನೆ ಕಣ ಬಾ!"

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೩

## ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

ಅವಧಿ : ೩ ಗಂಟೆಗಳು ಗರಿಷ್ಠ ಅಂಕಗಳು : ೧೦೦

**I.** ಕೊಟ್ಟಿರುವ ವಿಷಯಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ ೫ x ೮ =೪೦

೧. ಅವಜ್ಞೆಗೀಡಾದ ಸ್ಥಳೀಯ ಮೀಮಾಂಸೆಗಳು

೨. ಶ್ರಮಣ ಪರಂಪರೆ

೩. ಕಾವ್ಯ ಮೀಮಾಂಸೆಯ ಪ್ರಮುಖ ನಿಲುವುಗಳು

೪. ಪ್ರಕ್ರಿಯಾ ಮೀಮಾಂಸೆ

೫. ಭಾರತೀಯರನ್ನು ಆಳುತ್ತಿರುವ ಆತ್ಮವಾದ

೬. ಅನೇಕಾಂತವಾದ

೭. ಪ್ರಮಾಣ ನಿರಾಕರಣೆ

೮. ವೇದ ನಿರಾಕರಣೆ

೯. ಕಾವ್ಯ ಪ್ರಯೋಜನ

೧೦. ತಾತ್ವಿಕ ವಿಮರ್ಶೆ



**II.** ಕೊಟ್ಟಿರುವ ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಎರಡು ಪುಟಕ್ಕೆ ಕಡಿಮೆಯಿಲ್ಲದಂತೆ ಉತ್ತರಿಸಿರಿ ೨ x ೧೫=೩೦

೧. ಕನ್ನಡ ಕಾವ್ಯ ಮೀಮಾಂಸೆ ಮತ್ತು ಸಂಸ್ಕೃತ ಕಾವ್ಯ ಮೀಮಾಂಸೆ ಇವೆರಡರ ನಡುವಿನ ಭಿನ್ನ ನೆಲೆಗಳನ್ನು ಕುರಿತು ವಿವೇಚಿಸಿ.

೨. ಪ್ರಕ್ರಿಯಾ ಮೀಮಾಂಸೆ ಎಂದರೇನು? ಅದರ ಸ್ವರೂಪವನ್ನು ವಿವರಿಸಿ.

೩. ಪ್ರಮಾಣ ಎಂದರೇನು? ಪ್ರಮಾಣ ನಿರಾಕರಣೆಯ ಸಾಧ್ಯತೆಗಳನ್ನು ಕುರಿತು ಚರ್ಚಿಸಿ.

೪. ಕಾವ್ಯ ಪ್ರಯೋಜನಗಳ ಕುರಿತು ವಿಚಾರ ಮಾಡಿ.

**II** ಕೊಟ್ಟಿರುವ ಪ್ರಶ್ನೆಗಳಲ್ಲಿ ಮೂರಕ್ಕೆ ಪುಟಕ್ಕೆ ಕಡಿಮೆಯಿಲ್ಲದಂತೆ ಉತ್ತರಿಸಿರಿ: ೩ x ೧೦=೩೦

೧. ವಿಮರ್ಶೆ ಎಂದರೇನು? ಅದರ ನಿಲುವುಗಳ ಕುರಿತು ವಿಚಾರ ಮಾಡಿ.

೨. ಸಮಗಾರ ಭೀಮವ್ವ ಕವನದ ಪ್ರಾಯೋಗಿಕ ವಿಮರ್ಶೆಯ ಪ್ರಮುಖ ಅಂಶಗಳನ್ನು ಚರ್ಚಿಸಿ

೩. ನೇಮಿಚಂದ್ರರು ಸ್ತ್ರೀವಾದಿ ದೃಷ್ಟಿಕೋನದ ಬಗ್ಗೆ ನಡೆಸಿರುವ ಚಿಂತನೆಗಳ ಕುರಿತು ಬರೆಯಿರಿ.

೪. ಪಂಪನ ಕೃತಿಗಳನ್ನು ಓದಿದ ಸಂದರ್ಭವನ್ನು ದೇವನೂರು ಮಹಾದೇವ ಅವರು ತಮ್ಮ ಅನುಭವಗಳನ್ನು ಹೇಗೆ ಹೇಳಿಕೊಂಡಿದ್ದಾರೆ? ತಿಳಿಸಿ.

೫. ಕವಿರಾಜಮಾರ್ಗದ ಹೆಚ್ಚಳವನ್ನು ಕುರಿತು ಕೆ.ವಿ. ನಾರಾಯಣ ಅವರ ಅಭಿಪ್ರಾಯಗಳೇನು? ತಿಳಿಸಿಕೊಡಿ.

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೪

## ಭಾಷಾ ವಿಜ್ಞಾನ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

ಅವಧಿ : ೩ ಗಂಟೆಗಳು          ಗರಿಷ್ಠ ಅಂಕಗಳು : ೧೦೦

**I**. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.          ೪x೫=೨೦

೧. ಸಂವಹನ ಮಾಧ್ಯಮಗಳಲ್ಲಿ ಕನ್ನಡ ಭಾಷೆಯನ್ನು ಬಳಸಿಕೊಂಡಿರುವ ಬಗೆಯನ್ನು ತಿಳಿಸಿ.

೨. ಶೈಲಿವಿಜ್ಞಾನವನ್ನು ಪರಿಚಯ ಮಾಡಿಕೊಡಿ.

೩. ಮಾತೃಭಾಷಾ ಶಿಕ್ಷಣದ ಬಗ್ಗೆ ಬರೆಯಿರಿ.

೪. ಉಪಭಾಷೆಗಳು ಉಂಟಾಗಲು ಕಾರಣಗಳನ್ನು ತಿಳಿಸಿ.

೫. ಕನ್ನಡ ಭಾಷೆಯ ಏಕೀಕರಣ ಎಂದರೇನು? ಪರಿಚಯಿಸಿ.

೬. ಆಕೃತಿಮಾ ವಿಜ್ಞಾನ ಮತ್ತು ವಾಕ್ಯವಿಜ್ಞಾನವನ್ನು ಕುರಿತು ಬರೆಯಿರಿ.

**II**. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.          ೩x೧೦=೩೦

೭. ಕ್ಷೇತ್ರಭಾಷಾ ವಿಜ್ಞಾನ ಎಂದರೇನು? ಪರಿಚಯ ಮಾಡಿಕೊಡಿ.

೮. ಲಿಪಿ ಪರಿಷ್ಕರಣ ಎಂದರೇನು? ಬಿಎಂಶ್ರೀ ಅವರ ಕೊಡುಗೆಯನ್ನು ತಿಳಿಸಿ.

೯. ಕನ್ನಡ ಭಾಷೆಯ ಅವಸ್ಥಾಂತರಗಳಾವುವು? ಪರಿಚಯಿಸಿ.

೧೦. ಮಂಡ್ಯ ಕನ್ನಡದ ವಿಶಿಷ್ಟತೆಯನ್ನು ಕುರಿತು ಬರೆಯಿರಿ.

(ಪು.ತಿ.ನೋ)



**III** ಯಾವುದಾದರೂ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.

೨x೧೫=೩೦

೧೧. ಐತಿಹಾಸಿಕ ಹಾಗೂ ತೌಲನಿಕ ಭಾಷಾವಿಜ್ಞಾನದ ಸ್ವರೂಪವನ್ನು ತಿಳಿಸಿ.

೧೨. ಭಾಷಾ ದ್ವಿರೂಪತ್ವ ಎಂದರೇನು? ಭಾಷಾವಿಜ್ಞಾನಿಗಳ ಅಭಿಪ್ರಾಯಗಳೊಂದಿಗೆ ಚರ್ಚಿಸಿ.

೧೩. ಶಿಷ್ಟಭಾಷೆ ಎಂದರೇನು? ಅದು ರೂಪುಗೊಳ್ಳುವ ಬಗೆಯನ್ನು ತಿಳಿಸಿ.

೧೪. ವ್ಯಾಕರಣವೆಂದರೇನು? ಭಾಷಾವಿಜ್ಞಾನಿಗಳ ಅಭಿಪ್ರಾಯಗಳೊಂದಿಗೆ ಪರಿಚಯಿಸಿ.

**IV**. ಯಾವುದಾದರೂ ಐದು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.   ೫x೪=೨೦

೧೫. ಭಾಷಾವಾರು ಪ್ರಾಂತಗಳು

೧೬. ಪಾರಿಭಾಷಿಕ ಪದಗಳು

೧೭. ಡಿ.ಎಲ್. ನರಸಿಂಹಾಚಾರ್

೧೮. ಆಡಳಿತದಲ್ಲಿ ಕನ್ನಡ

೧೯. ತೌಲನಿಕ ಸಂಶೋಧನೆ

೨೦. ಗುಲ್ಬರ್ಗ ಕನ್ನಡ

೨೧. ಗಣಕಭಾಷಾ ವಿಜ್ಞಾನ

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೫

ಪ್ರಶ್ನೆಪತ್ರಿಕೆ – ೫

## ಜನಪದ ಸಾಹಿತ್ಯ – ಕನ್ನಡ ಸಂಸ್ಕೃತಿ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

ಅವಧಿ : ೩ ಗಂಟೆಗಳು ಗರಿಷ್ಠ ಅಂಕಗಳು : ೧೦೦

### ‘ಎ’ ಭಾಗ

**I**. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ೫x೧೦=೫೦

೧. ಜಾನಪದ ಎಂದರೇನು? ಜಾನಪದವನ್ನು ಕುರಿತು ಬಂದಿರುವ ವಿವಿಧ ವ್ಯಾಖ್ಯೆಯ ಹಿನ್ನೆಲೆಯಲ್ಲಿ ವಿವರಿಸಿರಿ.

೨. ಜನಪದ ಸಾಹಿತ್ಯ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ಮಹತ್ವವೇನು? ವಿಶ್ಲೇಷಿಸಿ.

೩. ಜನಪದ ಸಾಹಿತ್ಯದ ಸಂಪಾದನ ಮತ್ತು ಸಂಶೋಧನೆಯ ವೈಶಿಷ್ಟ್ಯತೆಯನ್ನು ಕುರಿತು ಬರೆಯಿರಿ.

೪. ಜನಪದ ಮಹಾಕಾವ್ಯಗಳ ಸ್ವರೂಪವನ್ನು ಚರ್ಚಿಸಿ.

೫. ‘ಮುಸುರೆ ತಿಕ್ಕುವವಳು’ ಕಥೆಯ ಸ್ವಾರಸ್ಯವೇನು? ವಿವರಿಸಿ.

೬. ಗಾದೆಗಳ ಗುಣಲಕ್ಷಣಗಳನ್ನು ತಿಳಿಸಿ. ನೀತಿಯನ್ನು ಬಿತ್ತರಿಸುವ ಗಾದೆಗಳ ಬಗ್ಗೆ ಬರೆಯಿರಿ.

೭. ಜನಪದ ಕಥನಗೀತೆಯ ವೈಶಿಷ್ಟ್ಯವನ್ನು ವಿವರಿಸಿ.

೮. ಹಲಗಲಿಯ ಬೇಡರು ಲಾವಣಿಯಲ್ಲಿನ ರಾಷ್ಟ್ರಪ್ರೇಮವನ್ನು ಕುರಿತು ಬರೆಯಿರಿ.

**II**. ಈ ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ. ೫x೪=೨೦

೧. ಜನಪದ ಕತೆ  
೨. ಉತ್ತರದೇವಿ  
೩. ನಿಂಬೆ ಒಳಗಲ ರಂಭೆ  
೪. ನಿಗಲ ಬಲಿ  
೫. ಒಗಟು  
೬. ಸಿರಿಕಾವ್ಯ





### ‘ಬಿ’ ಭಾಗ

**III**. ಐದನೆಯ ಪ್ರಶ್ನೆ ಬಿಡದಂತೆ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ೩x೧೦=೩೦

೧. ಕರ್ನಾಟಕ ಸಂಸ್ಕೃತಿ ಧರ್ಮ ಸಮನ್ವಯದ ಸಾಕ್ಷೀರೂಪ ಹೇಗೆ? ಶಾಸನ, ಕವಿ ಕಾವ್ಯಗಳ ಆಧಾರದ ಮೇಲೆ ವಿವರಿಸಿ.

೨. ಕರ್ನಾಟಕದ ರಾಜಮನೆತನಗಳು ಕಲೆ ಮತ್ತು ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳನ್ನು ವಿಶ್ಲೇಷಿಸಿ.

೩. ಕರ್ನಾಟಕವನ್ನು ಸಂಸ್ಕೃತಿ ಸಂಪನ್ನ ದೇಶವೆಂದು ಕರೆಯಲು ಕಾರಣವೇನು? ವಿವರಿಸಿ.

೪. ಕನ್ನಡಿಗರ ಕನ್ನಡ ಪ್ರೇಮವನ್ನು ಕುರಿತು ಬರೆಯಿರಿ.

೫. ಈ ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.

೧. ಬಾದಾಮಿ ಚಾಲುಕ್ಯರು

೨. ವಚನಕಾರರು

೩. ಕರ್ನಾಟಕ ಸಂಗೀತ

೪. ಗೊಮ್ಮಟ ವಿಗ್ರಹ

೫. ಸಂಸ್ಕೃತಿ

೬. ಹುಲಿತನವನ್ನು ಮರೆತ ಹುಲಿಮರಿ

೭. ಹ್ಯುಯೆನ್‌ತ್ಸಾಂಗನ ಮಾತುಗಳು

* * *